ಊ) ಇಲ್ಲ. ಸಾರ್ವಜನಿಕ ಕುಂದು ಕೊರತೆಗಳ ವಿಭಾಗವು ಬ್ಯೂರೋವಿನ ಒಂದು ಭಾಗವಾಗಿದೆ.

ಗಡಿ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾದ ಹಣದ ಬಗ್ಗೆ.

1069 - ಶ್ರೀ ಸುಭಾಸ್ ಜೋಶಿ (ನಿಪ್ಪಾಣಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಡಿ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಮತ ಕ್ಷೇತ್ರಕ್ಕೆ ಮಂಜೂರಾದ ಹಣವೆಷ್ಟು?

ಆ) ರಸ್ತೆ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಗಡಿ ಪ್ರದೇಶದ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ನಿಪ್ಪಾಣಿ ಮತ ಕ್ಷೇತ್ರದಲ್ಲಿ ಬರುವ ಲೋಕೋಪಯೋಗಿ ಇಲಾಖೆ ರಸ್ತೆಗಳ ಅಭಿವೃದ್ಧಿಗಾಗಿ ಯಾವುದೇ ಹಣ ಮಂಜೂರು ಆಗಿರುವುದಿಲ್ಲ.

ಆ) ಗಡಿ ಪ್ರದೇಶ ಲೋಕೋಪಯೋಗಿ ಇಲಾಖೆ ರಸ್ತೆ ಅಭಿವೃದ್ಧಿ ಪ್ರಸ್ತಾವನೆಗಳಿಗೆ ಅನುದಾನ ಬಿಡುಗಡೆ ಆದನಂತರದ ಕ್ರಮ ತೆಗೆದುಕೊಳ್ಳಲಾಗುವುದು.

ನಿಪ್ಪಾಣಿ ಮಾರಾಟ ತೆರಿಗೆ ನಾಕಾದಿಂದ ವಸೂಲಿ ಮಾಡಲಾದ ತೆರಿಗೆ.

1070 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿ ಮಾರಾಟ ತೆರಿಗೆ ನಾಕಾದಿಂದ ಕಳೆದ ವರ್ಷಗಳಲ್ಲಿ ವಸೂಲಿ ಮಾಡಲಾದ ಮಾರಾಟ ತೆರಿಗೆ ಮೊತ್ತವೆಷ್ಟು? (ವಾರ್ಷಿಕ ವಿವರ ನೀಡುವುದು)

ಆ) ಸರ್ಕಾರವು ಮಾರಾಟ ತೆರಿಗೆ ನಾಕಾವನ್ನು ನಿಪ್ಪಾಣಿಯಿಂದ ಸ್ಥಳಾಂತರಿಸುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ದಂಡದ ರೂಪದಲ್ಲಿ ನಿಪ್ಪಾಣಿ ಮಾರಾಟ ತೆರಿಗೆ ಚೆಕ್‌ಪೋಸ್ಟ್‌ನಲ್ಲಿ ಕಳೆದ ಎರಡು ವರ್ಷಗಳಲ್ಲಿ ವಸೂಲಾದ ಮೊತ್ತವು ಈ ರೀತಿ ಇದೆ.

1988-89 ರೂ 14.93 ಲಕ್ಷ

1989-90 ರೂ. 11.51 ಲಕ್ಷ

ಆ) ಈ ರೀತಿಯ ಯಾವುದೇ ಪ್ರಸ್ತಾವನೆಯಿರುವುದಿಲ್ಲ.

ಹುಬ್ಬಳ್ಳಿ - ಧಾರವಾಡದಲ್ಲಿನ ಪ್ರತಿ ಸರ್ಕಾರಿ ಕಛೇರಿಗೆ ನೀಡಲಾದ ವಾಹನ ಸಂಖ್ಯೆ

1046 - ಶ್ರೀ ಗೋಪಿನಾಥ್ ಆರ್. ಸಂಡ್ರಾ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡದಲ್ಲಿನ ಪ್ರತಿ ಸರ್ಕಾರಿ ಕಛೇರಿಗೆ ನೀಡಿರುವ ವಾಹನಗಳ ಸಂಖ್ಯೆ ಎಷ್ಟು.

ಆ) ಅದರಲ್ಲಿ ಉಪಯೋಗಿಸದೇ ಇರುವ ವಾಹನಗಳ ಸಂಖ್ಯೆ ಎಷ್ಟು ಮತ್ತು ಎಂದಿನಿಂದ ಉಪಯೋಗಿಸುತ್ತಿಲ್ಲ.

ಇ) ಅವುಗಳನ್ನು ವಿಲೇ ಮಾಡದೇ ಇರಲು ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅನುಬಂಧದಲ್ಲಿ ತೋರಿಸಲಾಗಿದೆ.